*ನಾಗರಾಜ ರಾಮಚಂದ್ರ ಹೆಗಡೆ, ಹೊಲನಗದ್ದೆ*
*ಧಾರಾವಾಹಿ ನೋಡುವವರಿಗೆ ತಾಳ್ಮೆ ಎಷ್ಟಿರಬೇಕು?*



ಟಿವಿ ಒಡೆದುಹಾಕದಷ್ಟಿದ್ದರೆ ಸಾಕು!

*ಮಾಲತಿರಾಜು, ಬೆಂಗಳೂರು*
*ಸಂನ್ಯಾಸಿಗಳೇಕೆ ಕಾವಿಬಟ್ಟೆಯನ್ನೇ ಧರಿಸುತ್ತಾರೆ?*
ಕಾವಿಲ್ಲದ ಜೀವನಕ್ಕೆ ಕಾವಿಯೇ ಸರಿಯಂತೆ

*ಶಂಕರೇಗೌಡ, ಮಂಡ್ಯ*
*ಇಷ್ಟೆಲ್ಲಾ ವೈಜ್ಞಾನಿಕವಾಗಿ ಮುಂದುವರೆದಿದ್ದರೂ ಅಷ್ಟೇ ಮೂಢನಂಬಿಕೆಗಳು ಇವೆಯಲ್ಲಾ..?*
ಇರಿ, ಇರಿ. ಅಸಲಿಗೆ ನಾವು ಇಷ್ಟೆಲ್ಲಾ ವೈಜ್ಞಾನಿಕವಾಗಿ ಮುಂದುವರೆದಿದ್ದೇವೆ ಎಂಬುದೇ ಒಂದು ಬೃಹತ್ ಮೂಢನಂಬಿಕೆ!

*ಎಂ.ಆರ್.ಪವನ್‌ಕುಮಾರ್, ಬಳ್ಳಾರಿ*
*ಲಾಟರಿಗೂ, ಷೇರುಮಾರುಕಟ್ಟೆಗೂ ಏನು ವ್ಯತ್ಯಾಸ?*



ಲಾಟರಿಯಲ್ಲಿ ದಿವಾಳಿಯಾಗಲು ಸಮಯ ಬೇಕು; ಷೇರುಮಾರುಕಟ್ಟೆಯಲ್ಲಿ ದಿಢೀರ್ ದಿವಾಳಿ ಸೌಲಭ್ಯ ಲಭ್ಯ.

*ಆರ್.ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಈ ವಿಶ್ವ ಹಣಮಯವೋ, ಬಲಮಯವೋ, ಜ್ಞಾನಮಯವೋ, ಭಯಮಯವೋ?*
ಭಯಮಯ! ಭಯ ತೊಡೆಯುವ ಸಾಧನಗಳಾದ ಜ್ಞಾನ, ಹಣ, ಬಲದ ಶೋಧವೇ ಜೀವನ!

*ಮಹಾವೀರ ಕಾಸಾರ, ಚನ್ನಗಿರಿ*
*ಗ್ರಾಹಕರ ದಿನಾಚರಣೆ ಆಚರಿಸುವಂತೆ ನೀವು ವಾಚಕರ ದಿನಾಚರಣೆ ಏಕೆ ಆಚರಿಸುವುದಿಲ್ಲ?*
ನಿತ್ಯೋತ್ಸವಕ್ಕೇ ಉತ್ಸವ ಬೇಕೆ? ನಿಮ್ಮಂತಹ ಸಹೃದಯರು ಕೊಂಡು ಓದಿದ ದಿನವೆಲ್ಲಾ ನಮಗೆ ವಾಚಕರ ದಿನ ಆಚರಿಸಿದ ಸುಖಾನುಭವವೇ!

*ಬಿ.ಎಸ್.ರಾಜಣ್ಣ, ಬಾದಾಮಿ*
*ಮದುವೆ ಎಂಬುದು ಅನಿವಾರ್ಯವೇ?*
ಸ್ವಾವಲಂಬನೆಯಿದ್ದು, ಮಹತ್ವಾಕಾಂಕ್ಷೆಯಿರುವ ಹೆಣ್ಣಿಗೆ ವಿವಾಹ ಶಾಪ. ಮಿಕ್ಕೆಲ್ಲರಿಗೂ ಅನಿವಾರ್ಯ.

*ಜಾಕೋಬ್ ಡಿಸೋಜ, ಕುರುವಳ್ಳಿ*
*ಜಾತ್ಯತೀತರು ಎಂದರೆ ಯಾರು ಸಾರ್?*
ಧ್ವನಿಮಾಯಾ ಕಲಾವಿದೆ ಇಂದುಶ್ರೀಯ ಡಿಂಕು! ಆಕೆಯ ಬೊಂಬೆ ತೋರುವ ಜಾತ್ಯತೀತ ಗುಣ ಬೊಮ್ಮನ ಬೊಂಬೆಯಲ್ಲಿಲ್ಲ!

*ಪ್ರದೀಪಕುಮಾರ, ಹೂವಿನಹಡಗಲಿ*
*ಅನೇಕ ಸಂದರ್ಭಗಳಲ್ಲಿ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದುಬಿಡುತ್ತದೆ; ಅದಕ್ಕೆ ಉತ್ತರ ಸಿಗುವುದು ಯಾವಾಗ?*
ನೀವು ಕೇಳಿದಿರಿ ಅಂಕಣಕ್ಕೆ ಕಳುಹಿಸಿದಾಗ?

*ಹ.ನಾ.ಕೃ, ಬೆಂಗಳೂರು*
*ಶಂಕರಾಚಾರ್ಯರು ಜೀವಸಹಿತ ಕೇದಾರದ ಗುಹೆಯಲ್ಲಿ ಅದೃಶ್ಯರಾದರು, ರಾಘವೇಂದ್ರರು ಬೃಂದಾವನಸ್ಥರಾದರು. ಇದು ಆತ್ಮಹತ್ಯೆಯಲ್ಲವೇ ಸ್ವಾಮಿ?*
ಗುಹೆಗೆ, ಬೃಂದಾವನಕ್ಕೆ ಅಂದಿನ ಕಾಲದಲ್ಲಿ ಕಿಟಕಿ, ವೆಂಟಿಲೇಟರ್ ಇದ್ದಿತೇ, ಇಲ್ಲವೇ ಎಂಬ ಮಾಹಿತಿ ಇಲ್ಲವಾದ್ದರಿಂದ ತೀರ್ಪು ನೀಡಲಾಗದು!

*ರಮಾನಂದಶರ್ಮಾ, ಬೆಂಗಳೂರು*
*ಸಚಿನ್ ವಿರುದ್ಧ ಮಹಾತ್ಮ ಗಾಂಧಿ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಏನಾಗಬಹುದು?*
ಸಚಿನ್ ತಮ್ಮ ನಾಮಪತ್ರವನ್ನು ಹಿಂತೆಗೆದುಕೊಳ್ಳಬೇಕಾಗಬಹುದು.

*ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು*
*2012ರಲ್ಲಿ ಪ್ರಳಯವಾದರೆ ಈ ಅಂಕಣದಲ್ಲಿ ನಾವು ಕೇಳುವಂತಿಲ್ಲ, ನೀವು ಹೇಳುವಂತಿಲ್ಲವೆಂಬ ಚಿಂತೆ ಕಾಡಿದೆಯಲ್ಲಾ..?*
ಪಾಪಿ ಚಿರಾಯುವಾದ್ದರಿಂದ ನಾನಿರುತ್ತೇನೆ, ಸುಧಾ ಅಮೃತವಾದ್ದರಿಂದ ಇರುತ್ತದೆ, ನಿಮ್ಮ ಬಂದೋಬಸ್ತು ಮಾಡಿಕೊಳ್ಳಿ ರೆಡ್ಡಿಗಾರು.

*ಅಮರಯ್ಯ, ಶೋರಾಪೂರ*
*ನಿಮ್ಮ ಕೊನೆಯ ಆಶೆ ಯಾವುದು?*
ಕೊನೆಯಾಗದಿರುವುದು!

## ಬಹುಮಾನಿತ ಪ್ರಶ್ನೆ

*ವಿ.ಹಮೀದ್, ವಿಟ್ಲ*
*ಅನ್ಯರೊಂದಿಗೆ ಐಕ್ಯತೆಯಿಂದ ವರ್ತಿಸುವ ಅರ್ಧಾಂಗಿ ಪತಿಯೊಂದಿಗೆ ಭಿನ್ನತೆಯಿಂದ ವರ್ತಿಸುವುದೇಕೆ?*
ಪತಿ ಎಂಬುದು ಸತಿ ಪದಕ್ಕೆ ವಿರುದ್ಧ ಪದ ಎಂದು ಶಾಲೆಯಲ್ಲಿ ಮೇಷ್ಟ್ರೇ ಹೇಳಿಕೊಡುವರಲ್ಲಾ.. ಹಾಗೆಯೇ ಇರುತ್ತಾಳಷ್ಟೆ!

*ಎಸ್.ಆರ್.ದೇಸಾಯಿ, ರಾಯಚೂರು*
*ಯಾವ ಸಮಯದಲ್ಲಿ ವಿಚಾರ ಮಾಡಿದರೆ ಬಹುಮಾನಿತ ಪ್ರಶ್ನೆ ಹೊಳೆಯಬಹುದು?*
ನಾವೀನ್ಯತೆ, ಸಾಮಾಜಿಕ ಕಳಕಳಿ ಮನದಲ್ಲಿ ಮೂಡಿದ ಸಮಯದಲ್ಲಿ!

*ಶ್ರೀಮತಿ ರತ್ನ ಸತ್ಯೇಂದ್ರ, ಮೈಸೂರು*
*ಮೃತ್ಯುವನ್ನು ಗೆಲ್ಲಲು ವರ್ಷಕ್ಕೆ ಎಷ್ಟು ಸಲ ಮೃತ್ಯುಂಜಯಹೋಮ ಮಾಡಿಸಬೇಕು?*
ನೀವು ಎಷ್ಟು ಸಾರಿ ಮೈನ್ ರೋಡ್ ಕ್ರಾಸ್ ಮಾಡುತ್ತೀರೋ ಅಷ್ಟು ಸಲ.

*ಗಾಯತ್ರಿ, ರಾಜಾಜಿನಗರ*
*ಆಂಟಿಗಳು ಸುಂದರವಾಗಿರುವಷ್ಟು ಹುಡುಗಿಯರು ಏಕಿರುವುದಿಲ್ಲ?*
ಹಾಗೇನಿಲ್ಲ. ಹುಡುಗಿಯರದು ಮೊಗ್ಗಿನ ಚೆಲುವು, ಆಂಟಿಯರದು ಹೂವಿನ ಸೊಬಗು!

*ಪಿ.ಎಸ್.ಶ್ರೀವತ್ಸ, ಬೆಂಗಳೂರು*
*ಹಣವಿರುವವರಿಗಿಂತಲೂ ಹಣವಿಲ್ಲದಿರುವವನೇ ನೆಮ್ಮದಿಯ ಜೀವನ ನಡೆಸಲು ಕಾರಣ?*
ರೈಡ್‌ನ ಭಯ ಇರುವುದಿಲ್ಲವಲ್ಲ!

*ಹೆಚ್.ಸಿ.ಭಾಗ್ಯಕುಮಾರ್, ಜಯನಗರ*
*ಈ ಡಾಕ್ಟರ್‌ಗಳು ಉಪ್ಪು ತಿಂದರೆ ಬಿಪಿ, ಸಕ್ಕರೆ ತಿಂದರೆ ಮಧುಮೇಹ, ಖಾರ ತಿಂದರೆ ಗ್ಯಾಸ್ಟ್ರಿಕ್, ಉಪವಾಸವಿದ್ದರೆ ಅಸಿಡಿಟಿ ಎನ್ನುವರಲ್ಲಾ.. ಇರುವುದಾದರೂ ಹೇಗೆ?*



ಅಂತಹ ಡಾಕ್ಟರ್‌ಗಳಿಂದ ದೂರವಿದ್ದರೆ ಸಾಕು, ಆರೋಗ್ಯ ತಾನೇ ಸುಧಾರಿಸುತ್ತದೆ.

■ ರಾಮ್